ಅ) ಇವುಗಳಿಗೆ ಆಗಿರುವ ವೆಚ್ಚವೆಷ್ಟು?

ಇ) ಇವುಗಳು ಕಾರ್ಯೋನ್ಮುಖವಾಗಲು ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ?

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು):

ಅ) 34.

ಆ) ರಾಷ್ಟ್ರೀಯ ರೇಷ್ಮೆ ಯೋಜನೆಯಡಿಯಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲು ಕಾಮಗಾರಿಗಳಿಗಾಗಿ ರೂ. 113-00 ಲಕ್ಷ ವ್ಯಯವಾಗಿರುತ್ತದೆ.

ಇ) ಈ ಮಾದರಿ ಚಾಕಿ ಸಾಕಾಣಿಕಾ ಕೇಂದ್ರಗಳ ನಿರ್ವಹಣೆಗೆ 'ಸಿ' ಮತ್ತು 'ಡಿ' ದರ್ಜೆ ನೌಕರರ ಸೇವೆ ಅಗತ್ಯವಿದ್ದು, ಆ ಹುದ್ದೆಗಳನ್ನು ಸೃಷ್ಟಿಸಬೇಕಾಗಿರುತ್ತದೆ. ಇದರ ಬದಲಾಗಿ ಈ ಕೇಂದ್ರಗಳ ದೈನಂದಿನ ಕಾರ್ಯವನ್ನು ನಡೆಸಿಕೊಂಡು ಹೋಗಲು ಸರ್ಕಾರೇತರ ಸಂಸ್ಥೆಗಳು: ರೈತರ ಸೇವಾ ಸಂಸ್ಥೆಗಳಿಗೆ ವಹಿಸಿಕೊಡಲು ಉದ್ದೇಶಿಸಿರುತ್ತದೆ. ತನ್ಮೂಲಕ ಅವುಗಳ ಕಾರ್ಯೋನ್ಮುಖವಾಗಲು ಕಾರ್ಯಕ್ರಮ ಕೈಗೊಳ್ಳಲಾಗಿರುತ್ತದೆ.

Subject: Providing residential and office facilities Village Accountants.

1058 (1529)

Sri Mudda Hanume Gowd (Kunigal): Will the Hon'ble Revenue Minister be pleased to state

a) How many Village Accountants are there in the State?

b) Among them how many Village Accountants are having residential and office facilities?

c) Whether Government would take action to provide these facilities to the remaining Village Accountant?

Sri B.Somashekar (Minister for Revenue):

a) 9213.

b) 824.

c) Action would be taken to provide these facilities to the remaining Village Accountants in stages depending upon availability of funds.

ವಿಷಯ: ಸಮಾಜ ಕಲ್ಯಾಣ ಇಲಾಖೆಯ ಅಡಿಗೆಯವರು, ಅಡಿಗೆ ಸಹಾಯಕರುಗಳಿಗೆ ವಿಶೇಷ ಭತ್ಯೆ.

1059 (1511)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವಿದ್ಯಾ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 2489 ಮಂದಿ ಅಡಿಗೆಯವರು, ಅಡಿಗೆ ಸಹಾಯಕರು ಇವರು ರಜಾ ದಿನಗಳಲ್ಲೂ ಕರ್ತವ್ಯ ನಿರ್ವಹಿಸುತ್ತಿದ್ದು ಇವರಿಗೆ ವಿಶೇಷ ಭತ್ಯೆ ಅಥವಾ ರಜಾವನ್ನು ಮಂಜೂರು ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಮೇಲ್ಕಂಡ ವಿಷಯದ ಬಗ್ಗೆ ವಿಶೇಷ ಭತ್ಯೆ ಅಥವಾ ರಜಾವನ್ನು ಸಿಬ್ಬಂದಿಯವರಿಗೆ ನೀಡುವಲ್ಲಿ ಸರ್ಕಾರವು ತೆಗೆದುಕೊಂಡ ನಿಲುವೇನು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಸದ್ಯಕ್ಕೆ ಹಾಸ್ಟೆಲುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರುಗಳಿಗೆ ರಜಾ ದಿವಸಗಳಲ್ಲಿ ಸರದಿ ಆಧಾರದ ಮೇಲೆ ರಜೆಯನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದೆ. ರಜೆಯ ಬದಲಿಗೆ ವಿಶೇಷ ಭತ್ಯೆ ನೀಡುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ಹೊಸ ಜಿಲ್ಲೆಗಳಲ್ಲಿ ಸ್ವಯಂ ಆಡಳಿತ ನಡೆಸುವ ವ್ಯವಸ್ಥೆ

1060 (1512)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ, ಚಾಮರಾಜನಗರ, ಗದಗ, ಹಾವೇರಿ, ಬಾಗಲಕೋಟೆ, ಉಡುಪಿ